# ಚಿನ್ನು

ಡಾ. ಕೆ.ಬಿ. ರಂಗಸ್ವಾಮಿ
ಕಲೆ: ಸಂತೋಷ್ ಸಸಿಹಿತ್ಲು

ದಾರಿಯಲ್ಲಿ ಪುಟ್ಟನೊಂದು
ನಾಯಿಮರಿಯ ಕಂಡನು
ಅತ್ತ ಇತ್ತ ಸುತ್ತ ನೋಡಿ
ಮೆಲ್ಲನೆತ್ತಿಕೊಂಡನು

ದ್ರಾಕ್ಷಿಯಂತೆ ಕಪ್ಪು ಕಣ್ಣು
ರೇಶಿಮೆಯು ಮೈಯ ನುಣುಪು
ರೆಕ್ಕೆಯಂಥ ಅಗಲ ಕಿವಿಯು
ಮಲ್ಲಿಗೆಯಂತೆ ಬಣ್ಣ ಬಿಳುಪು

ಬಿಟ್ಟುಬರಲು ಪುಟ್ಟನಿಗೆ
ಮನಸೇ ಬಾರದಾಯಿತು
ಎದೆಗೆ ಅವುಚಿಕೊಂಡಾಗ
ಹೃದಯ ಹಗುರವಾಯಿತು

ಮನೆಗೆ ತಂದು ಹಾಲನಿತ್ತು
ಅಮ್ಮನಿಗೆ ತೋರಿಸಿದನು
ತಾನೇ ಅದನು ಸಾಕುವೆನೆಂದು
ಗೋಗರೆದು ಹೇಳಿದನು

ನಸುನಗುತಾ ಅವನ ಅಮ್ಮ
ತಲೆಯಾಡಿಸಿ ಒಪ್ಪಿದಳು
ತಾನೂ ಅದನು ಎತ್ತಿಕೊಂಡು
ಮುದ್ದು ಮುದ್ದುಗರೆದಳು
ಚಿನ್ನು ಎಂಬ ಹೆಸರನಿಟ್ಟು
ಪುಟ್ಟ ಕುಣಿದು ಕುಪ್ಪಳಿಸಿದನು
ಬೆನ್ನು ಸವರಿ ಚಿನ್ನು ಜೊತೆಗೆ
ಆಡಿ ಓಡಿ ನಲಿದನು!



## ಕುಂಚ ಪ್ರಪಂಚ

ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಎಳೆಯರು ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ವೈಯಕ್ತಿಕ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in





**ಎ. ಅನನ್ಯಾ**
5ನೇ ತರಗತಿ, ಫ್ರಾಂಕ್ ಆಂಟೊನಿ ಪಬ್ಲಿಕ್ ಸ್ಕೂಲ್, ಬೆಂಗಳೂರು





**ಶ್ರಾವಣಿ**
10ನೇ ತರಗತಿ, ಮಹರ್ಷಿ ವಿದ್ಯಾ ಮಂದಿರ ಶಾಲೆ, ಚಿಕ್ಕಮಗಳೂರು